ಕರ್ನಾಟಕ ಸರ್ಕಾರ
Government of Karnataka
ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ
ಡಿ ಎಸ್ ಇ ಆರ್ ಟಿ
DSERT
DEPARTMENT OF STATE EDUCATIONAL RESEARCH AND TRAINING
NO 4, 100 FT RING ROAD, BANASHANKARI 3RD STAGE BENGALURU - 085
Email: dsert.kar@nic.in Website : http://dsert.kar.nic.in
Phone : 080 26422372 26422373 26422374 Fax:26422377

ಸಂಖ್ಯೆ DPI.DSERT SIS INSPIRE MANAK 01/2019-20. ದಿನಾಂಕ:03/06/2020

# ಸುತ್ತೋಲೆ

ವಿಷಯ : INSPIRE Award Scheme ಅಡಿಯಲ್ಲಿ ಆನ್‌ಲೈನ್ ನಾಮಿನೇಷನ್ ಮಾಡುವ ಕುರಿತು.

ಉಲ್ಲೇಖ : ಡಾ॥ ಸಂಜಯ್ ಮಿಶ್ರಾ, ಡಿ.ಎಸ್.ಟಿ ನವದೆಹಲಿ ಇವರ ಪತ್ರ ಸಂಖ್ಯೆ. F.No.1/01/2019–IAM ದಿನಾಂಕ:02/06/2020.

*****

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಪತ್ರವನ್ನು ಈ ಪತ್ರದೊಂದಿಗೆ ಅಡಕಗೊಳಿಸಿದೆ. INSPIRE Award Scheme ಕಾರ್ಯಕ್ರಮವನ್ನು INSPIRE Awards MANAK (Million Minds Augmenting National Aspiration and Knowledge) ಎಂದು ಮರುನವೀಕರಿಸಿ, ಮಾನ್ಯ ಪ್ರಧಾನ ಮಂತ್ರಿಗಳ 'Startup India' ಉಪಕ್ರಮದಡಿಯಲ್ಲಿ ಮುಂದುವರೆಸಲಾಗುತ್ತಿದೆ.

2020–21ನೇ ಸಾಲಿನಲ್ಲಿ E-Management of INSPIRE Award Scheme (E MIAS) ಅಡಿಯಲ್ಲಿ ಆನ್‌ಲೈನ್ ನಾಮನಿರ್ದೇನಗಳನ್ನು ದಿನಾಂಕ:01/06/2020 ರಿಂದ ಪುನರಾರಂಭಿಸಲಾಗಿದೆ. 6 ರಿಂದ 10ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ 10 ರಿಂದ 15ನೇ ವಯಸ್ಸಿನ ವಿದ್ಯಾರ್ಥಿಗಳಲ್ಲಿ ಸೃಜನಾತ್ಮಕ / ನವೀನ ಚಿಂತನೆಯನ್ನು ಮೂಡಿಸುವ ಮೂಲ ಉದ್ದೇಶವನ್ನು ಹೊಂದಿರುವ ಇನ್‌ಸ್ಪೈರ್ ಪ್ರಶಸ್ತಿ MANAK ಕಾರ್ಯಕ್ರಮದಡಿಯಲ್ಲಿ ಅರ್ಹ ಶಾಲೆಗಳಿಂದ ವಿದ್ಯಾರ್ಥಿಗಳ ಅತ್ಯುತ್ತಮ 2–3 ಯೋಜನೆಗಳನ್ನು ಆನ್‌ಲೈನ್ ನಾಮಿನೇಷನ್ ಮಾಡಬಹುದಾಗಿದೆ. ಈ ನಿಗದಿತ ಅವಧಿಯೊಳಗೆ ನಿಮ್ಮ ಡಯಟ್ ವ್ಯಾಪ್ತಿಯ ಎಲ್ಲಾ ಸರ್ಕಾರಿ ಅನುದಾನಿತ, ಅನುದಾನ ರಹಿತ ಹಿರಿಯ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಿಗೆ ಉತ್ತಮ ಯೋಜನೆಗಳನ್ನು ನಾಮಿನೇಷನ್ ಮಾಡುವಂತೆ ಕ್ರಮ ವಹಿಸಲು ಸೂಚಿಸಿದೆ.

ಶಾಲೆಗಳು ತಮ್ಮ ಯೋಜನೆಯನ್ನು ಆನ್‌ಲೈನ್ ಮೂಲಕ ಸಲ್ಲಿಸುವ ಪೂರ್ವದಲ್ಲಿ E- MIAS Portal ನಲ್ಲಿ (www.inspireawards-dst.gov.in) ನೋಂದಣಿಯಾಗುವುದು ಕಡ್ಡಾಯವಾಗಿದೆ. ಈಗಾಗಲೇ ನೋಂದಣಿ ಆಗಿರುವ ಶಾಲೆಗಳು ಮತ್ತೊಮ್ಮೆ ನೋಂದಣಿ ಆಗುವ ಅವಶ್ಯಕತೆ ಇರುವುದಿಲ್ಲ. ಡಯಟ್ ಪ್ರಾಂಶುಪಾಲರು ತಮ್ಮ ವ್ಯಾಪ್ತಿಯ 6–10ನೇ ತರಗತಿ ಇರುವ ಎಲ್ಲಾ ಶಾಲೆಗಳು E MIAS Portal ನಲ್ಲಿ ನೋಂದಣಿ ಆಗಿರುವುದನ್ನು ಖಾತ್ರಿ ಪಡಿಸಿಕೊಂಡು ವರದಿ ಮಾಡುವುದು.

ವಿದ್ಯಾರ್ಥಿಗಳ ನಾಮಿನೇಷನ್ ಮಾಡುವ ಸಂದರ್ಭದಲ್ಲಿ ಕಡ್ಡಾಯವಾಗಿ ವಿದ್ಯಾರ್ಥಿಯ ಪ್ರಾಜೆಕ್ಟ್ Synopsis (in pdf format) ಅನ್ನು ಅಪ್‌ಲೋಡ್ ಮಾಡುವುದು. ತಮ್ಮ ಡಯಟ್ ವ್ಯಾಪ್ತಿಯ ಎಲ್ಲಾ

ಶಾಲೆಗಳ ಅರ್ಹ ವಿದ್ಯಾರ್ಥಿಗಳನ್ನು ನಾಮಿನೇಷನ್ ಮಾಡುವುದು ಕಡ್ಡಾಯವಾಗಿದೆ. ಶಾಲಾ ಮುಖ್ಯಸ್ಥರಿಗೆ ಸವಿವರವಾದ ಸುತ್ತೋಲೆಯನ್ನು ನೀಡಿ, online filling ಮಾಡಲು ಅಗತ್ಯ ಕ್ರಮ ಕೈಗೊಳ್ಳುವುದು.

ಈ ಹಿಂದೆ ರಾಜ್ಯ ಮತ್ತು ರಾಷ್ಟ್ರ ಮಟ್ಟದಲ್ಲಿ ಪ್ರದರ್ಶನಗೊಂಡ ಯೋಜನೆಗಳ ರೀತಿಯಲ್ಲಿ ಸೃಜನಾತ್ಮಕ ಹಾಗೂ ಮಾನವ ಕಲ್ಯಾಣ / ನೆರವಿನ ಯೋಜನೆಗಳನ್ನು ಚಿಂತಿಸಲು ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡಿ ಶಾಲಾ ಹಂತದಲ್ಲಿನ ಅತ್ಯುತ್ತಮ 2-3 ಯೋಜನೆಗಳನ್ನು ಆಯ್ಕೆ ಮಾಡಿಕೊಳ್ಳತಕ್ಕದ್ದು.

ಕೋವಿಡ್-19 ಇರುವುದರಿಂದ ವಿದ್ಯಾರ್ಥಿಗಳು ಶಾಲೆಗಳಿಗೆ ಹಾಜರಾಗುತ್ತಿಲ್ಲ. ಈ ಸಂದರ್ಭವನ್ನು ನಾವೀನ್ಯಯುತ ಪ್ರಾಜೆಕ್ಟ್‌ಗಳ ಪಟ್ಟಿ (idea list) ಮಾಡಿಕೊಳ್ಳಲು ಉಪಯೋಗಿಸಿಕೊಳ್ಳಬಹುದಾಗಿದೆ. ಶಾಲೆಗಳು ಪುನರಾರಂಭವಾದಾಗ ಆನ್‌ಲೈನ್ ಪೋರ್ಟಲ್ ಮೂಲಕ ಪ್ರಸ್ತಾವನೆಯನ್ನು ಸಲ್ಲಿಸಬಹುದಾಗಿದೆ.

ನಿಮ್ಮ ವ್ಯಾಪ್ತಿಯಲ್ಲಿ ಇನ್‌ಸ್ಪೈರ್ ಕಾರ್ಯಕ್ರಮದ ಯಶಸ್ವಿ ಅನುಷ್ಠಾನಕ್ಕೆ ಅಗತ್ಯ ಕ್ರಮ ವಹಿಸುವುದು. ಈ ಕುರಿತಂತೆ ಪ್ರಗತಿ ವರದಿಯನ್ನು sis.dsert-ka@nic.in ಗೆ ಇ-ಮೇಲ್ ಮಾಡಲು ತಿಳಿಸಿದೆ.

ನಿರ್ದೇಶಕರು,
ಡಿ.ಎಸ್.ಇ.ಆರ್.ಟಿ. ಬೆಂಗಳೂರು.

ಇವರಿಗೆ : ಅಗತ್ಯ ಕ್ರಮಕ್ಕಾಗಿ.

1. ರಾಜ್ಯದ ಎಲ್ಲಾ ಡಯಟ್ ಪ್ರಾಂಶುಪಾಲರುಗಳಿಗೆ ಅಗತ್ಯ ಕ್ರಮಕ್ಕಾಗಿ.
2. ರಾಜ್ಯದ ಎಲ್ಲಾ ಉಪನಿರ್ದೇಶಕರು (ಆಡಳಿತ)  ಅಗತ್ಯ ಕ್ರಮಕ್ಕಾಗಿ.
3. ರಾಜ್ಯದ ಎಲ್ಲಾ ಕ್ಷೇತ್ರಶಿಕ್ಷಣಾಧಿಕಾರಿಗಳಿಗೆ, ಡಯಟ್ ಪ್ರಾಂಶುಪಾಲರ ಮುಖಾಂತರ ಅಗತ್ಯ ಕ್ರಮಕ್ಕಾಗಿ.
4. ರಾಜ್ಯದ ಎಲ್ಲಾ ಕ್ಷೇತ್ರ ಸಂಪನ್ಮೂಲ ಸಮನ್ವಯಾಧಿಕಾರಿಗಳಿಗೆ, ಕ್ಷೇತ್ರಶಿಕ್ಷಣಾಧಿಕಾರಿರವರ ಮುಖಾಂತರ ಅಗತ್ಯ ಕ್ರಮಕ್ಕಾಗಿ.

ಪ್ರತಿಗಳು : ಮಾಹಿತಿಗಾಗಿ.

1. ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ, ಬಹುಮಹಡಿಗಳ ಕಟ್ಟಡ, ಬೆಂಗಳೂರು ರವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
2. ಮಾನ್ಯ ಆಯುಕ್ತರು, ಸಾ.ಶಿ.ಇ ರವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
3. ಮಾನ್ಯ ರಾಜ್ಯ ಯೋಜನಾ ನಿರ್ದೇಶಕರು, ಸಮಗ್ರ ಶಿಕ್ಷಣ, ಎಸ್.ಎಸ್.ಎ /ಆರ್.ಎಂ.ಎಸ್.ಎ ರವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
4. ಮಾನ್ಯ ಅಪರ ಆಯುಕ್ತರು, ಸಾ.ಶಿ.ಇ ಧಾರವಾಡ ರವರಿಗೆ ಮಾಹಿತಿಗಾಗಿ ಹಾಗೂ ಅಗತ್ಯ ಅನುಪಾಲನೆಗಾಗಿ ಕೋರಿ ಕಳುಹಿಸಿದೆ.
5. ಮಾನ್ಯ ಅಪರ ಆಯುಕ್ತರು, ಸಾ.ಶಿ.ಇ ಗುಲ್ಬರ್ಗಾ ರವರಿಗೆ ಮಾಹಿತಿಗಾಗಿ ಹಾಗೂ ಅಗತ್ಯ ಅನುಪಾಲನೆಗಾಗಿ ಕೋರಿ ಕಳುಹಿಸಿದೆ.
6. ನಿರ್ದೇಶಕರು, ಪ್ರೌಢಶಿಕ್ಷಣ, ಸಾ.ಶಿ.ಇ ರವರಿಗೆ ಮಾಹಿತಿಗಾಗಿ.
7. ನಿರ್ದೇಶಕರು, ಪ್ರಾಥಮಿಕ, ಸಾ.ಶಿ.ಇ ರವರಿಗೆ ಮಾಹಿತಿಗಾಗಿ.
8. ಕಛೇರಿ ಪ್ರತಿ.

D:\i5-101\FY20-21\Inspire\I.A Online Nomination.docx